# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **434 (382)** |
| **ಸದಸ್ಯರ ಹೆಸರು** | : | **ಶ್ರೀ ವೈ. ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** |
| **ಉತ್ತರಿಸುವ ದಿನಾಂಕ** | : | **19.02.2024** |
| **ಉತ್ತರಿಸುವ ಸಚಿವರು** | : | **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು** |

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಆಯುಷ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಿವಿಧ ದರ್ಜೆಯ ವೈದ್ಯಾಧಿಕಾರಿಗಳ ಮತ್ತು ತಜ್ಞ ವೈದ್ಯರುಗಳ ನಡುವೆ ಇರುವ ವ್ಯತ್ಯಾಸಗಳೇನು ಹಾಗೂ ಇವರುಗಳ ಕರ್ತವ್ಯ ಕಾರ್ಯವ್ಯಾಪ್ತಿ ಮತ್ತು ಜವಾಬ್ದಾರಿಗಳೇನು (ಮಾಹಿತಿ ನೀಡುವುದು) | ಆಯುಷ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಿವಿಧ ದರ್ಜೆಯ ವೈದ್ಯಾಧಿಕಾರಿಗಳ ಮತ್ತು ತಜ್ಞ ವೈದ್ಯರುಗಳ ಕರ್ತವ್ಯ ಕಾರ್ಯವ್ಯಾಪ್ತಿ ಹಾಗೂ ಜವಾಬ್ದಾರಿಗಳು ಈ ಕೆಳಕಂಡಂತಿವೆ:<br>• ಆಸ್ಪತ್ರೆ/ಚಿಕಿತ್ಸಾಲಯಗಳಿಗೆ ಬರುವ ಒಳ ಹಾಗೂ ಹೊರ ರೋಗಿಗಳಿಗೆ ಸೂಕ್ತ ಚಿಕಿತ್ಸೆ ಒದಗಿಸುವುದು ಹಾಗೂ ಉಚಿತ ಔಷಧಿ ವಿತರಣೆ.<br>• ವೈದ್ಯಾಧಿಕಾರಿಗಳು ಆಸ್ಪತ್ರೆ/ಚಿಕಿತ್ಸಾಲಯದ ಮುಖ್ಯಸ್ಥರಾಗಿ ಆಸ್ಪತ್ರೆ/ಚಿಕಿತ್ಸಾಲಯದ ಹಾಗೂ ಸಿಬ್ಬಂದಿಗಳ ಮೇಲ್ವಿಚಾರಣೆ.<br>• ಇಲಾಖೆಯಿಂದ ನಿಗದಿಯಾದ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು.<br>• ಐಇಸಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು.<br>• ರಾಷ್ಟ್ರೀಯ ಆಯುಷ್ ಅಭಿಯಾನದಡಿ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುವುದು.<br>• ಆಕುಕ ಇಲಾಖೆಯ ಸಹಯೋಗದೊಂದಿಗೆ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳಿಗೆ ಭಾಗಿಯಾಗುವುದು.<br>• ಆಯುಷ್ ಪದ್ಧತಿಯ ಬಗ್ಗೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸುವುದು.<br>• ಆರೋಗ್ಯ ಕ್ಷೇಮ ಕೇಂದ್ರಗಳನ್ನಾಗಿ ಗುರುತಿಸಲಾದ ಚಿಕಿತ್ಸಾಲಯಗಳಲ್ಲಿ ಸಾರ್ವಜನಿಕರಿಗೆ ಯೋಗ ತರಬೇತುದಾರರ ಮೂಲಕ ಯೋಗ ತರಬೇತಿಯನ್ನು ಒದಗಿಸುವುದು.<br>• ಅಂತರಾಷ್ಟ್ರೀಯ ಯೋಗ ದಿನಾಚರಣೆ ಹಾಗೂ ಇನ್ನಿತರೆ ಆಯುಷ್ ದಿನಾಚರಣೆಗಳನ್ನು ಆಚರಿಸುವುದು.<br>• ಉಚಿತ ಆರೋಗ್ಯ ತಪಾಸಣೆ, ಆಯುಷ್ ಸೇವಾಗ್ರಾಮ, ಮನೆಮದ್ದು ಹಾಗೂ ಇನ್ನಿತರೆ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು. |
| ಆ) | ಆಯುರ್ವೇದ ಚಿಕಿತ್ಸೆಯನ್ನು ಮನೆ ಮನೆಗೂ ತಲುಪಿಸಲು ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಇದರಲ್ಲಿ ತಜ್ಞ ವೈದ್ಯರುಗಳ ಹೊಣೆಗಾರಿಕೆಗಳೇನು; (ಮಾಹಿತಿ ನೀಡುವುದು) | |

| | | |
|---|---|---|
| | | • ಆಸ್ಪತ್ರೆ/ಚಿಕಿತ್ಸಾಲಯದ ಹೊರರೋಗಿ/ಒಳರೋಗಿ ಮಾಹಿತಿ, ಆರ್ಥಿಕ ಖರ್ಚು – ವೆಚ್ಚದ ಮಾಹಿತಿ ಇನ್ನಿತರ ಅವಶ್ಯಕ ಮಾಹಿತಿಯನ್ನು ಮಾಹೆವಾರು ಒದಗಿಸುವುದು.<br>• ಮೇಲಾಧಿಕಾರಿಗಳಿಂದ ಸೂಚಿಸಲ್ಪಡುವ ಇತರೆ ಕರ್ತವ್ಯಗಳನ್ನು ನಿರ್ವಹಿಸುವುದು.<br>**ತಜ್ಞ ವೈದ್ಯರುಗಳ ಹೊಣೆಗಾರಿಕೆಗಳು** ಕೆಳಕಂಡಂತಿರುತ್ತವೆ:<br><br>• ಆಸ್ಪತ್ರೆ/ಚಿಕಿತ್ಸಾಲಯಗಳಿಗೆ ಬರುವ ಒಳ ಹಾಗೂ ಹೊರ ರೋಗಿಗಳಿಗೆ ಸೂಕ್ತ ಚಿಕಿತ್ಸೆ ಒದಗಿಸುವುದು ಹಾಗೂ ಉಚಿತ ಔಷಧಿ ವಿತರಣೆ.<br>• ಐಇಸಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು.<br>• ರಾಷ್ಟ್ರೀಯ ಆಯುಷ್ ಅಭಿಯಾನದಡಿ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು.<br>• ಉಚಿತ ಆರೋಗ್ಯ ತಪಾಸಣೆ, ಆಯುಷ್ ಸೇವಾ ಗ್ರಾಮ, ಮನೆಮದ್ದು ಹಾಗೂ ಇನ್ನಿತರೆ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು.<br>• ವೈದ್ಯಾಧಿಕಾರಿಗಳು ಹಾಗೂ ಇತರೆ ಮೇಲಾಧಿಕಾರಿಗಳಿಂದ ಸೂಚಿಸಲ್ಪಡುವ ಇತರೆ ಕರ್ತವ್ಯಗಳನ್ನು ನಿರ್ವಹಿಸುವುದು.<br>ಆಯುರ್ವೇದ ಚಿಕಿತ್ಸೆಯನ್ನು ಮನೆ ಮನೆಗೂ ತಲುಪಿಸಲು ರಾಷ್ಟ್ರೀಯ ಆಯುಷ್ ಅಭಿಯಾನ ಯೋಜನೆಯಡಿ ಒಟ್ಟು 49 ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ/ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲಾಗಿರುತ್ತದೆ.<br><br>ಸದರಿ ಮೇಲ್ದರ್ಜೆಗೇರಿಸಲಾದ ಚಿಕಿತ್ಸಾಲಯ/ಆಸ್ಪತ್ರೆಗಳಿಗೆ ತಲಾ 02 ತಜ್ಞ ವೈದ್ಯರುಗಳನ್ನು ತಾತ್ಕಾಲಿಕ ಗುತ್ತಿಗೆ ಆಧಾರದ ಮೇಲೆ ಒದಗಿಸಿ ಇವರ ಮೂಲಕ ಜನಸಾಮಾನ್ಯರಿಗೆ ಉಚಿತ ವೈದ್ಯಕೀಯ ಸೇವೆಯನ್ನು ನೀಡಲು ಕ್ರಮವಹಿಸಲಾಗಿದೆ. |
| ಇ) | ಕಳೆದ ಹತ್ತು ವರ್ಷಗಳಿಂದ ಜಿಲ್ಲಾ ಹಾಗೂ ತಾಲ್ಲೂಕು ಆಯುಷ್ ಆಸ್ಪತ್ರೆಗಳಲ್ಲಿ ಸಾರ್ವಜನಿಕರಿಗೆ ವಿಭಾಗವಾರು ತಜ್ಞ ವೈದ್ಯರುಗಳಿಂದ ಚಿಕಿತ್ಸೆಗಳು ಸಮರ್ಪಕವಾಗಿ ದೊರೆಯುತ್ತಿದೆಯೇ; ಇಲ್ಲದಿದ್ದಲ್ಲಿ ಸರ್ಕಾರ ಕೈಗೊಂಡಿರುವ ತೀರ್ಮಾನಗಳೇನು; (ವಿವರ ನೀಡುವುದು) | ರಾಷ್ಟ್ರೀಯ ಆಯುಷ್ ಅಭಿಯಾನದಡಿಯಲ್ಲಿ ಮೇಲ್ದರ್ಜೆಗೇರಿಸಲಾದ ಆಯುರ್ವೇದ ಆಸ್ಪತ್ರೆಗಳಲ್ಲಿ ಈ ಕೆಳಗಿನ ತಜ್ಞ ವೈದ್ಯಕೀಯ ವಿಭಾಗಗಳು ಇರುತ್ತವೆ.<br><br>1. ಪಂಚಕರ್ಮ<br>2. ಕಾಯಚಿಕಿತ್ಸಾ<br>3. ಶಾಲಕ್ಯತಂತ್ರ<br>4. ಶಲ್ಯತಂತ್ರ<br><br>ಪ್ರತಿ ತಜ್ಞ ವೈದ್ಯಕೀಯ ವಿಭಾಗಕ್ಕೆ ಈ ಕೆಳಕಂಡ ಮಾನವ ಸಂಪನ್ಮೂಲಗಳನ್ನು ಒದಗಿಸಲಾಗಿದೆ.<br><br>1.ತಜ್ಞ ವೈದ್ಯರು - 02<br>2.ಔಷಧಿ ವಿತರಕರು-01<br>3.ಮಸಾಜಿಸ್ಟ್-02 |

| | | |
|---|---|---|
| | | 4.ಸ್ತ್ರೀ ರೋಗಅಟೆಂಡರ್ -01<br>5.ಕ್ಷಾರ ಸೂತ್ರಅಟೆಂಡರ್ - 01<br>6.ಮಲ್ಟಿಪರ್ಪಸ್ ವರ್ಕರ್ -01<br><br>ಸದರಿ ಆಸ್ಪತ್ರೆಗಳಿಗೆ ರಾಷ್ಟ್ರೀಯ ಆಯುಷ್ ಅಭಿಯಾನದಡಿಯಲ್ಲಿ ಇತರೆ ಮೂಲಭೂತ ಸೌಕರ್ಯಗಳಾದ ಕಟ್ಟಡ ನವೀಕರಣ ,ಉಪಕರಣಗಳು ಔಷಧಿಗಳು, ಪೀಠೋಪಕರಣಗಳು, ಸಾದಿಲ್ವಾರು ವೆಚ್ಚಗಳಿಗೆ ಅನುದಾನವನ್ನು ಒದಗಿಸಲಾಗುತ್ತಿದೆ. |
| ಈ) | ಆಯುರ್ವೇದ ಅಂದರೆ ಕೇವಲ ಮನೆ ಮುದ್ದು, ನಾಟಿ ಔಷಧಿವೆನ್ನದೆ ಆಯುರ್ವೇದದಲ್ಲಿರುವ ವಿವಿಧ ವಿಭಾಗಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; ಇದರಲ್ಲಿ ಇರುವ ವೈದ್ಯಕೀಯ ವಿಭಾಗಳು ಯಾವುವು? (ಮಾಹಿತಿ ನೀಡುವುದು) | ಆಯುರ್ವೇದ ಅಂದರೆ ಕೇವಲ ಮನೆಮದ್ದು ಮತ್ತು ನಾಟಿ ಔಷಧಿ ಅನ್ನದೆ ಆಯುರ್ವೇದವು ವೈಜ್ಞಾನಿಕ ಹಿನ್ನಲೆ ಹೊಂದಿದ್ದು, ಆಯುರ್ವೇದ ಆಸ್ಪತ್ರೆಗಳಲ್ಲಿ NAM, NHM ಹಾಗೂ ರಾಜ್ಯ ಸರ್ಕಾರದ ವಿವಿಧ ಯೋಜನೆಗಳ ಅಡಿಯಲ್ಲಿ ಆಯುರ್ವೇದದ ವಿವಿಧ ವಿಭಾಗಗಳ ಅಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>ವಿಶೇಷವಾಗಿ ಪಂಚಕರ್ಮ, ಕ್ಷಾರಸೂತ್ರ, ನೇತ್ರರೋಗ ವಿಭಾಗಗಳ ಅಭಿವೃದ್ಧಿ ಹಾಗೂ ಸಾಂಕ್ರಮಿಕವಲ್ಲದ ರೋಗಗಳನ್ನು (NCD) ತಡೆಗಟ್ಟುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. |

**ಸಂಖ್ಯೆ: ಆಕುಕ 26 ಪಿಟಿಡಿ 2024**

**( ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು